



ಅರುಣ ಪಿ. ಭಟ್ಟ


## ವಾರ ಭವಿಷ್ಯ: 23.10.2025ರಿಂದ 29.10.2025ರವರೆಗೆ




ದಾನ ಧರ್ಮದಲ್ಲಿ ಆಸಕ್ತಿ ಮೂಡುತ್ತದೆ. ವೃತ್ತಿ ವಿಚಾರದಲ್ಲಿ ವ್ಯಾಪಾರಸ್ಥರ ಜತೆಗೆ ಮಾತುಕತೆ ನಡೆಸುವ ಯೋಗ ಇದೆ. ಸೋದರ ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗುತ್ತದೆ. ಸಾಮಾಜಿಕ ಸ್ಥಾನಮಾನ ಉತ್ತಮವಾಗುತ್ತದೆ. ವ್ಯಾಪಾರ ವಿಸ್ತರಣೆಗೆ ಅವಕಾಶ ದೊರೆಯಲಿದೆ. ಸಕಾರಾತ್ಮಕ ಆಲೋಚನೆ ಇರುತ್ತದೆ. ಶುಭದಿನ: 27. ಸೌಂದರ್ಯ ಲಹರಿ ಪಠಿಸಿರಿ.

ಹಣಕಾಸು ವ್ಯವಹಾರದಲ್ಲಿ ಪ್ರಗತಿ ಇದೆ. ಈವರೆಗೆ ನೀವು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ದುಬಾರಿ ವಸ್ತುಗಳನ್ನು ಖರೀದಿಸುವ ಯೋಗ ಇದೆ. ಪ್ರೀತಿಪಾತ್ರರ ಜೊತೆ ಬಾಂಧವ್ಯ ಗಟ್ಟಿಯಾಗಲಿದೆ. ಅನಗತ್ಯ ವಿವಾದಗಳಲ್ಲಿ ನಿಮ್ಮನ್ನು ಎಳೆಯುವ ಸಾಧ್ಯತೆ ಇದೆ. ನಿಮ್ಮ ಸಕಾರಾತ್ಮಕ ಆಲೋಚನೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಿರಿ. ಶುಭದಿನ: 26. ಹನುಮಾನ್ ಚಾಲೀಸ್ ಓದಿರಿ.




ಸಂತಾನ ಅಪೇಕ್ಷಿತ ದಂಪತಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಶೈಕ್ಷಣಿಕ ರಂಗದಲ್ಲಿ ಪ್ರಗತಿ ಇದೆ. ಹಿರಿಯರ ನೆರವು ಮತ್ತು ಮಾರ್ಗದರ್ಶನ ದೊರೆಯಲಿದೆ. ಹೆಚ್ಚುವರಿ ಆದಾಯವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗುತ್ತೀರಿ. ವಿರೋಧಿಗಳು ಈಗ ಅನಗತ್ಯ ವಾಗ್ವಾದಗಳನ್ನು ಎಳೆದು ತರಬಹುದು. ಸಂಗಾತಿ ಮಕ್ಕಳ ಜತೆ ಮುಖ್ಯ ವಿಚಾರ ಚರ್ಚಿಸುತ್ತೀರಿ. ಶುಭದಿನ: 23. ಶ್ರೀ ದತ್ತಗುರು ಸ್ತೋತ್ರ ಪಠಿಸಿರಿ.

ಸೇವಾ ವಲಯದಲ್ಲಿ ಇರುವವರಿಗೆ ಅಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೇಲಧಿಕಾರಿಗಳ ಜತೆ ಚರ್ಚಿಸಲಿದ್ದೀರಿ. ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳುವ ಯೋಗ. ಆತ್ಮೀಯರೊಂದಿಗೆ ಭಿನ್ನಾಭಿಪ್ರಾಯಗಳು ಕಾಣಿಸಿಕೊಳ್ಳಬಹುದು. ಆದರೆ ಅಂದುಕೊಂಡ ಗುರಿ ತಲುಪುವಲ್ಲಿ ಯಶಸ್ಸು ಕಾಣುವ ಸಾಧ್ಯತೆ ಇದೆ. ಶುಭದಿನ: 28. ಲಿಂಗಾಷ್ಟಕ ಪಠಿಸಿರಿ.









ಯಾವುದೇ ಕ್ಷೇತ್ರದ ಕೆಲಸಗಳು ಆಗಬೇಕಿದ್ದಲ್ಲಿ ಅನುಕೂಲ ಇದೆ. ನೀವು ಕೆಲಸ ಮಾಡುತ್ತಿರುವ ಸಂಸ್ಥೆಯಲ್ಲಿ ಪ್ರಶಸ್ತಿ ಗೌರವಕ್ಕೆ ನಿಮ್ಮ ಹೆಸರನ್ನು ಸೂಚಿಸುವ ಯೋಗ ಇದೆ. ಈ ಅವಧಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಇದೆ. ವೃತ್ತಿಪರ ಕೆಲಸಗಳನ್ನು ಈ ಹಿಂದಿಗಿಂತಲೂ ಪರಿಣಾಮಕಾರಿಯಾಗಿ ಮಾಡುವಿರಿ. ಶುಭದಿನ: 27. ಕಾಲಭೈರವನ ಸೇವೆ ಮಾಡಿರಿ.

ಉತ್ತಮವಾದ ಕ್ಷಣಗಳನ್ನು ಕಳೆಯಲಿದ್ದೀರಿ. ಕಾನೂನು ವ್ಯಾಜ್ಯಗಳು ಇದ್ದಲ್ಲಿ ನಿಮ್ಮ ಪರವಾದ ಬೆಳವಣಿಗೆಗಳು ಆಗಲಿವೆ. ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರ ನೀಡಲಿದ್ದೀರಿ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ದೊಡ್ಡ ಮೊತ್ತ ಒಳಗೊಂಡಿರುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನ ಕೈಗೊಳ್ಳುವ ಮುನ್ನ ತಾಳ್ಮೆಯಿಂದ ಇರಬೇಕು. ಶುಭದಿನ: 28. ಶ್ರೀಲಕ್ಷ್ಮೀಕನಕಧಾರಾ ಸ್ತೋತ್ರ ಪಠಣ ಮಾಡಿರಿ.





ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ಮದುವೆಗೆ ಸಂಬಂಧ ಹುಡುಕಲಾಗುತ್ತಿದೆಯೋ ಅಂಥವರಿಗೆ ಸೂಕ್ತ ಸಂಬಂಧ ದೊರೆಯಲಿದೆ. ವೃತ್ತಿನಿರತರಿಗೆ ಅಂದುಕೊಂಡ ಹುದ್ದೆಯನ್ನು ತಲುಪಿಕೊಳ್ಳುವ ಅವಕಾಶ ಇದೆ. ಬಹಳ ಕಡಿಮೆ ಸಂಪನ್ಮೂಲ, ಹಣದ ಮಧ್ಯೆ ಕೆಲಸ ಮಾಡುತ್ತಿರುವವರು ಸಹ ಕೌಶಲದ ಮೂಲಕ ಯಶಸ್ಸು ಪಡೆಯುವ ಅವಕಾಶ ಇದೆ. ಶುಭದಿನ: 26. ವಿಷ್ಣು ಸಹಸ್ರನಾಮ ಪಠಿಸಿರಿ.


ವೃತ್ತಿಪರ ಜೀವನದಲ್ಲಿ ಅತ್ಯುತ್ತಮ ಪ್ರಗತಿ. ಹೂಡಿಕೆಯಲ್ಲಿ ಅಂದುಕೊಂಡಂತೆಯೇ ಪ್ರಗತಿ ಸಾಧಿಸುವಿರಿ. ವಿರೋಧಿಗಳು ಸಮಸ್ಯೆಗಳನ್ನು ಮಾಡಬಹುದು. ಅವಿವಾಹಿತರಿಗೆ ಸೂಕ್ತ ಸಂಬಂಧಗಳು ದೊರೆಯುವ ಯೋಗ ಇದೆ. ಉದ್ಯೋಗ ಸ್ಥಳದಲ್ಲಿ ಸಹೋದ್ಯೋಗಿಗಳ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಗೌರವ ಕೀರ್ತಿ ದೊರೆಯಲಿದೆ. ಶುಭದಿನ: 24. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.





ಮಕ್ಕಳ ವೃತ್ತಿ ಜೀವನಕ್ಕೆ ಸಹಾಯ ಮಾಡಲಿದ್ದೀರಿ. ವ್ಯಾಪಾರ ಕ್ಷೇತ್ರದಲ್ಲಿ ಇರುವವರಿಗೆ ಏಳ್ಗೆ ಇದೆ. ಹೂಡಿಕೆಯಲ್ಲಿ ಉತ್ತಮ ಫಲಿತಾಂಶ ದೊರೆಯಲಿದೆ. ಈ ಹಿಂದಿನ ಮನಸ್ತಾಪಗಳು ಇದ್ದರೂ ನಿವಾರಣೆ ಆಗುತ್ತದೆ. ಸಂಗಾತಿ ಮಕ್ಕಳ ಜತೆಗೆ ಉತ್ತಮವಾದ ಸಮಯ ಕಳೆಯಲಿದ್ದೀರಿ. ವ್ಯವಹಾರದಲ್ಲಿ ಉನ್ನತ ಸ್ಥಾನಮಾನಗಳು ದೊರೆಯಲಿವೆ. ಶುಭದಿನ: 27. ಗುರು ರಾಘವೇಂದ್ರ ರಾಯರ ಆರಾಧನೆ ಮಾಡಿರಿ

ಮನೆ ದುರಸ್ತಿ ಹಾಗೂ ಅಲಂಕಾರಕ್ಕೆ ಹೆಚ್ಚಿನ ಖರ್ಚು ಮಾಡಲಿದ್ದೀರಿ. ಪೋಷಕರ ಜತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತದೆ. ಮಕ್ಕಳು ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಾಯ ಮಾಡಲಿದ್ದೀರಿ. ವಿದ್ಯಾರ್ಥಿಗಳು ಹಲವು ವಿಷಯದಲ್ಲಿ ಪರಿಣತಿ ಪಡೆಯುವ ಅವಕಾಶ ಇದೆ. ಆರೋಗ್ಯ ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಇರಬೇಕು. ಶುಭದಿನ: 24. ಶಿವಕವಚ ಪಠಣ ಮಾಡಿರಿ.




ಸಾಮಾಜಿಕ ಕ್ಷೇತ್ರದಲ್ಲಿ ಅತ್ಯುತ್ತಮ ಅವಕಾಶ ದೊರೆಯುತ್ತದೆ. ತಂತ್ರಜ್ಞರಿಗೆ ಉತ್ತಮ ಸಮಯ ಇದು. ಯಾವುದೇ ಕೆಲಸಕ್ಕೆ ಹೆಚ್ಚು ಶ್ರಮ ಹಾಕಬೇಕಾಗುತ್ತದೆ. ಅಂದುಕೊಂಡಂಥ ಫಲಿತಾಂಶ ಪಡೆಯಲಿದ್ದೀರಿ. ಯಾವ ಸಂಸ್ಥೆಯಲ್ಲಿ ಉದ್ಯೋಗ ಗಿಟ್ಟಿಸಬೇಕು ಎಂಬ ಇಚ್ಛೆ ಇರುತ್ತದೋ ಅಲ್ಲಿಂದ ಅವಕಾಶ ದೊರೆಯಲಿದೆ. ವೈಯಕ್ತಿಕ ಸಂಬಂಧದಲ್ಲಿ ಸಂತೋಷ ಇರುತ್ತದೆ. ಶುಭದಿನ: 25. ಆದಿತ್ಯ ಹೃದಯ ಪಠಣ ಮಾಡಿರಿ.

ಸ್ಥಿರಾಸ್ತಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಗತಿ ಇದೆ. ಪೋಷಕರ ಜತೆಗೆ ಈ ಹಿಂದೆ ಮನಸ್ತಾಪಗಳು ಆಗಿದ್ದಲ್ಲಿ ನಿವಾರಣೆ ಮಾಡಿಕೊಳ್ಳಲಿದ್ದೀರಿ. ಕುಟುಂಬದ ಒಗ್ಗಟ್ಟು ನಿಮಗೆ ಮನದಟ್ಟಾಗುತ್ತದೆ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಹಣಕಾಸು ಹೂಡಿಕೆ ವ್ಯವಹಾರದಲ್ಲಿ ಒಳ್ಳೆ ಲಾಭ ಮಾಡುವ ಅವಕಾಶ ದೊರೆಯಲಿದೆ. ಶುಭದಿನ: 26. ಶ್ರೀರಾಮರಕ್ಷಾ ಸ್ತೋತ್ರ ಓದಿರಿ.

